# ತಿಲ್ಲಾನ

# TILLANA

Monthly bulletin of Ganabharathi (R)

ಸಂಪುಟ ೧ ಸಂಚಿಕೆ ೧೨ Vol 1, No 12, August 1994 ಆಗಸ್ಟ್ ೧೯೯೪

ಸಂಪಾದಕರು : **ಡಾ ಟಿ. ಎನ್. ನಾಗರತ್ನ**


೧೭-೮-೧೯೯೪ ಬುಧವಾರ ಸಂಜೆ ೬-೩೦ (೨೯/೧೯೯೪)

ರಾಸವೃಂದ ಪ್ರಾಯೋಜಿತ ನೃತ್ಯ ಸಂಜೆ

ಪ್ರಾಯೋಜಕರು : ಡಾ ಕೆ. ರಾಮಶಾಸ್ತ್ರಿಗಳ ಸ್ಮರಣಾರ್ಥ ಮಗ ಡಾ ಕೆ.ಆರ್. ಈಶ್ವರ್ ಮತ್ತು ಸೊಸೆ ಶ್ರೀಮತಿ ನಂದಿನಿ ಈಶ್ವರ್

---

೨೭-೮-೧೯೯೪ ಶನಿವಾರ ಸಂಜೆ ೬ (೩೦/೧೯೯೪)

| | | |
|---|---|---|
| ಶ್ರೀ ಪಿ. ಮಚ್ಛೇಂದ್ರನಾಥ್ | .... | ಸ್ಯಾಕ್ಸೊಫೋನ್ |
| ಶ್ರೀ ಹರಿ | .... | ಸ್ಯಾಕ್ಸೊಫೋನ್ |
| ಶ್ರೀ ಮುರುಗಾನಂದ | .... | ಡೋಲು |
| ಶ್ರೀ ವಸಂತ | .... | ಡೋಲು |
| ಶ್ರೀ ರಾಧಾಕೃಷ್ಣ | .... | ಶ್ರುತಿ, ತಾಳ |

ಪ್ರಾಯೋಜಕರು

* ಡಾ ಡಿ. ವಿ. ಗುಂಡಪ್ಪನವರ ಸ್ಮರಣಾರ್ಥ ಪ್ರೊ ಶ್ರೀ ಎಸ್. ಕೆ. ಲಕ್ಷ್ಮೀರಾವ್
* ಶ್ರೀ ರಟ್ಟಿಹಳ್ಳಿ ರಾಮಪ್ಪನವರ ಸ್ಮರಣಾರ್ಥ ಮಗ ಶ್ರೀ ಆರ್. ನಾರಾಯಣಸ್ವಾಮಿ

---

೨೮-೮-೧೯೯೪ ಆದಿತ್ಯವಾರ ಸಂಜೆ ೬ (೩೧/೧೯೯೪)

ಗಾನಕಲಾಭೂಷಣ ಸ್ವರಮೂರ್ತಿ ಶ್ರೀ ವಿ.ಎನ್. ರಾವ್ ಸ್ಮರಣಾರ್ಥ

| | | |
|---|---|---|
| ಶ್ರೀಮತಿ ಪುಷ್ಪ ಕಾಶೀನಾಥ್ | .... | ವೀಣೆ |
| ಶ್ರೀ ಪಿ.ಜಿ. ಲಕ್ಷ್ಮೀನಾರಾಯಣ | .... | ಮೃದಂಗ |
| ಶ್ರೀ ಕೃಷ್ಣಮೂರ್ತಿ | .... | ಘಟ |

ಪ್ರಾಯೋಜಕರು : ಶ್ರೀ ಮೈಸೂರು ವಿ. ಸುಬ್ರಹ್ಮಣ್ಯ

## Ganabharathi presents at Veene Seshanna Bhavana

17-8-1994 Wednesday 6 30 pm (29/1994)

Dance evening directed by Raasa Vrinda

Sponsored by Dr K. R. Eswar and Smt Nandini Eswar in memory of Dr K. Rama Shastry

---

27-8-1994 Saturday 6 pm (30/1994)

| | | |
|---|---|---|
| **Sri P. Machendranath** | .... | saxophone |
| **Sri Hari** | .... | saxophone |
| Sri Murugananda | .... | dolu |
| Sri Vasanta | .... | dolu |
| Sri Radhakrishna | .... | sruti, tala |

Sponsors

* Prof S. K. Lakshmana Rao in memory of Dr D. V. Gundappa
* Sri R. Narayanaswamy in memory of his father Sri Rattehalli Ramappa

---

28-8-1994 Sunday 6 pm (31/1994)

In memory of Ganakala Bhushana Swaramurthy Sri V. N. Rao

| | | |
|---|---|---|
| **Smt Pushpa Kashinath** | ... | veena |
| Sri P G. Lakshminarayana | .... | mridanga |
| Sri Krishnamurthy | .... | ghata |

Sponsored by Sri Mysore V. Subramanya

---

25-8-1994 Thursday 6 pm

Sri Tyagaraja Sangeeta Sabha (R) presents at Veene Seshanna Bhavana

| | | |
|---|---|---|
| **Smt Usha Rajan**<br>**Smt Ratna Gopal** } | .... | vocal duet |
| Sri N.N. Ganeshkumar | .... | violin |
| Sri H.L. Sivasankar | .... | mridanga |

---

## FUTURE EVENTS

Sri Krishna Jayanti Utsava

| | | | |
|---|---|---|---|
| 2-9-94 | (1) Sri M. A. Chandan Kumar & party | .... | flute |
| | (2) Ms Lalita Padmini & party | .... | vocal |
| 3-9-94 | (1) Ms Kripa Nadig & party | .... | vocal |
| | (2) Sri Kartik & party | .... | mandolin |
| 4-9-94 | (1) Honouring Veteran Artists | | |
| | (2) Sri K. P. Upadhyaya & party | — | flute |

23 to 25-9-1994 Yuva Sangeeta Mela

# BETWEEN OURSELVES

Dear Members

Programme number 19/1994 had to be postponed : on that day (24 June 1994) Mridanga Artist Tumkur T.V. Bhadrachar (born 1946) breathed his last. Ganabharathi's relationship with him dates back to its early days He was a dependable and solid supporter of our ideals and aspirations. Our sympathies go with the family members of this 'drummer to the eternal melodies' who was called to rest too early.

19/1994 is rescheduled for October 1994. In June 1994 Ganabharathi in association with the Department of Kannada and Culture presented three cultural evenings : on 28 Karnatak vocal by Sri K. Sannahanumantappa and party; on 29 Odissi Nritya by Smt Nupur Chatterjee and young talents of Raasavrinda Kalavidaru; on 30 Kannada drama 'Nirantara' by Samudaya. Also on July 16 a Kannada drama 'Mooru Kasina Sangeeta Nataka' (Bertolt Brecht's 'Three-penny' opera) was staged at the Kalamandira auditorium. Direction and Production by Sri Ekbal Ahmed.

Link these numbers and arrive at the present serial numbers given in this issue. "How are you able to manage so many shows free ?" Quite a number of our wellwishers and artlovers pose this question with understandable concern. Very simple : "This frail vessel thou emptiest again and again, and fillest it ever with fresh life." Tagore, of course, addresses God here. But for us in Ganabharathi, God appears in the manifestation of people's generosity : it pours ! For a proof go through the monthly statement of donations received by "this frail vessel." You are welcome to add your mite : it is not how much you donate but the heart behind that act. "And other fell on good ground, and sprang up, and bore fruit an hundredfold" (St Luke 8 viii). All donations to Ganabharathi (R) are to be made out by crossed cheques (account payee). Income tax concession under section 80 G of the Act is available.

Karnatak vocal maestro R. K. Srikantan is blessed with the Tirumala Tirupati Asthana vidwan title. To this great artist who has been an asthana vidvan of the rasikas for several decades now, this divine blessing adds splendour—for "Beauty is the splendour of Truth" and "Truth" is yet another manifestation of divine music. We rejoice at the distinction conferred on this modern repository of ancient tradition.

Ganabharathi Sangeeta Nritya Saala (School) strength has crossed the 350 mark. Come any evening to see them sing and dance.

Ganabharathi is an effective and selfeffacing bridge between the rasikas and kalavidas. Here art alone is supreme. Because "Men may come, and men may go, but art goes on for ever !'

Yours ever in the service of Art

21 July 1994 Ganabharathi (R)

---

Donations etc received fron 22-6-1994 to 21-7-1994

| Rs 100 or more recorded here | | Rupees |
|---|---|---|
| Sri E. Srinivasa Prasad (LM) | .... | 1000 |
| Professor K. Shankar (SC) | ... | 5000 |
| Sri T.S. Anantarangachar (LM) | .... | 1000 |
| Dr S.J. Nagalotimath (LM) | | 1000 |
| Dr S.N. Mothi (D) | .... | 1000 |
| M/S The Hindu (D) | .... | 1200 |
| Sri S. Ramaprasad (D) | .... | 150 |
| M/S Gemini Distilleries (D) | .... | 2500 |
| Mrs Rohini Chandra Mohan (LM) | .... | 1000 |
| Sri T. S. Anantarangachar (GS) | .... | 500 |
| Prof S. K. Lakshmana Rao (SC) | .... | 5000 |
| Mrs Prema P. Attavar (GS) | .... | 250 |
| Prof K. R. Udupa (GS) | .... | 300 |

Mrs Meenakshi Sukumaran has donated a veena

---

LM : Lifemember : SC : Sponsored concert ; D : Donation : GS: School

# ಕವನವೇ ತಾವಾಗಬೇಕು.......

'ಲಘು ಸಂಗೀತ,' 'ಲಲಿತ ಸಂಗೀತ' ಅಥವಾ 'ಸುಗಮ ಸಂಗೀತ' ಅತ್ಯಲ್ಪಕಾಲದಲ್ಲಿ ಕಲಾರಸಿಕರ ಹೃದಯವನ್ನು ಸೆರೆ ಹಿಡಿಯಬಲ್ಲ, ಸೂರೆಗೊಳ್ಳಬಲ್ಲ, ನವರಸಭರಿತ, ಭಾವಪ್ರಧಾನವಾದ ಸಂಗೀತ ಪ್ರಕಾರ. ಇದು ಶಾಸ್ತ್ರೀಯ ಸಂಗೀತದ ಒಂದು ರೂಪಾಂತರವೇ.

ಲಲಿತ ಸಂಗೀತದಲ್ಲಿ ನಾಟ್ಯಸಂಗೀತ, ಕಾವ್ಯಗಾಯನ, ಘಜಲ್, ಕವ್ವಾಲಿ, ದೇವರನಾಮ,ಭಜನೆ, ಭಾವಗೀತೆ ಎಲ್ಲವೂ ಸೇರಿದರೂ ಇವು ಒಂದೊಂದೂ ಬೇರೆ ಬೇರೆಯ ಪ್ರಕಾರವೇ. ಒಂದೊಂದನ್ನು ಹಾಡುವ ಕ್ರಮವೂ ಬೇರೆ ಬೇರೆಯೇ. ಇವೆಲ್ಲವೂ ಸಾಹಿತ್ಯ ಪ್ರಧಾನವಾದ ಸಂಗೀತ ಪ್ರಕಾರಗಳು. ಸಾಮಾನ್ಯವಾಗಿ ಭಾವಗೀತಗಾಯನವನ್ನೇ ನಾವು 'ಸುಗಮ ಸಂಗೀತ' ಎಂದು ಕರೆಯುವ ವಾಡಿಕೆ. ಇದು ಇತ್ತೀಚೆಗೆ ಹುಟ್ಟಿದ ಒಂದು ಗಾಯನ ಪ್ರಕಾರ. ಜಾನಪದಗೀತೆಗಳಂತೆ ಭಾವಗೀತೆಗಳ ಕಾವ್ಯ ವಿಷಯಗಳೂ ಸಾಮಾನ್ಯವಾಗಿ ಮನುಷ್ಯನ ಜೀವನದ ಆಗು ಹೋಗುಗಳನ್ನೊಳಗೊಂಡಿರುತ್ತವೆ.

ಸುಗಮ ಸಂಗೀತದಲ್ಲಿ ಸಾಹಿತ್ಯಕ್ಕೆ ತುಂಬ ಮಹತ್ವದ ಸ್ಥಾನ; ಸಂಗೀತ ಇಲ್ಲಿ ವಾಹಕ ಮಾತ್ರ. ಸುಂದರ ಕಾವ್ಯ ಹಾಗೂ ಮಧುರಸ್ವರರಚನೆಯ ಸಂಯೋಜನೆಯನ್ನಿಲ್ಲಿ ಕಾಣಬಹುದು. ಆದರೆ ಕಾವ್ಯ ಭಾವವೇ ಪ್ರಧಾನವೆಂಬುದನ್ನು ಸುಗಮ ಸಂಗೀತಗಾರರು ಮರೆಯಬಾರದು. ಸಂಗೀತದಲ್ಲಿ ಒಂದೊಂದು ರಾಗಕ್ಕೂ ಒಂದೊಂದು ಭಾವ, ಒಂದೊಂದು ರಸವಿರುವಂತೆ ಸುಗಮ ಸಂಗೀತದಲ್ಲೂ ಹಾಡುವ ಒಂದೊಂದು ಕವನಕ್ಕೂ, ಒಂದೊಂದು ಭಾವ, ರಸ ಇದ್ದೇ ಇರುತ್ತವೆ. ಕಲಾವಿದನಿಗೆ ಕವನದ ಈ ಭಾವವನ್ನು ಅರ್ಥ ಮಾಡಿಕೊಂಡು ಅದಕ್ಕೆ ತಕ್ಕ ಸ್ವರಸಂಯೋಜನೆ ಮಾಡುವ ಕಲಾವಂತಿಕೆ ಅತಿಮುಖ್ಯ.

ಸುಗಮ ಸಂಗೀತವನ್ನು ಹಾಡಲು ಬೇಕಾದ ವಿಶೇಷಗುಣಗಳನ್ನು ಈ ರೀತಿ ಕ್ರೋಢೀಕರಿಸಬಹುದು :

(ಅ) ಶ್ರುತಿ, ಲಯ, ಸ್ವರಜ್ಞಾನದ ಪರಿಜ್ಞಾನ.

(ಆ) ಸಾಹಿತ್ಯ ಪ್ರಜ್ಞೆ.

(ಇ) ರಸಪುಷ್ಟಿ ಇರುವಂಥ ಸಾಹಿತ್ಯದ ಆಯ್ಕೆಯಲ್ಲಿ ಪರಿಣತಿ.

(ಈ) ಸಾಹಿತ್ಯದ ಅರ್ಥ, ಭಾವವನ್ನು ಗ್ರಹಿಸುವ ಶಕ್ತಿ.

(ಉ) ಸಾಹಿತ್ಯಕ್ಕೆ ತಕ್ಕ ಸಂಗೀತವನ್ನು ಸಂಯೋಜಿಸುವ ರಸಾಭಿಜ್ಞತೆ, ಭಾವಾಭಿಜ್ಞತೆ, ಕಲಾಭಿಜ್ಞತೆ.

(ಊ) ಸ್ವರಪಡಿಸಿ ಬರೆಯುವ ಶಕ್ತಿ.

(ಋ) ವಾದ್ಯಸಮ್ಮೇಳನ ಶಕ್ತಿ.

(ೠ) ರಾಗ ಜ್ಞಾನ.

(ಎ) ಮಧುರವಾದ ಕಂಠ.

ಇವೆಲ್ಲ ಇದ್ದರೆ ಒಬ್ಬ ಗಾಯಕ ಅಥವಾ ಗಾಯಕಿ ಭಾವಗೀತಗಾಯನದಲ್ಲಿ ರಸಸ್ರೋತವನ್ನು ಹರಿಸಿ ಶ್ರೋತೃಗಳಿಗೆ ರಸದೌತಣ ನೀಡಬಹುದು.

ಭಾವಗೀತೆಗಳನ್ನು ಸಂಗೀತಕ್ಕೆ ಅಳವಡಿಸುವಾಗ ಉತ್ಕೃಷ್ಟ ಕವನಗಳ ಆಯ್ಕೆಯ ಜೊತೆಗೆ, ಲಲಿತಪದಬಂಧವುಳ್ಳ ಸಾಹಿತ್ಯ ಹಾಡಿಕೆಗೆ ಬಲು ಸೊಗಸು, ಕವನದ ತುಂಬ ಬರೀ ಕ್ಲಿಷ್ಟ ಪದಗಳು ಒತ್ತಕ್ಷರಗಳೇ ತುಂಬಿದ್ದರೆ ಸ್ವರಸಂಯೋಜನೆ ಅಷ್ಟು ಅಹ್ಲಾದಕರವಾಗಿರುವುದಿಲ್ಲ ; ಕೇಳುವುದಕ್ಕೂ ಅಷ್ಟು ಹಿತವೆನಿಸಲಾರದು. ಇದರ ಜೊತೆಗೆ ಕವನದ ವಿಷಯ ಕೂಡ ಸುಂದರವಾಗಿರಬೇಕು. ಒಂದು ಗೂಬೆಯ ಮೇಲೋ, ಕೋತಿಯ ಮೇಲೋ ಫುಟ್‌ಪಾತಿನ ಮೇಲೊ, ಕಾಲೊರಸಿಯ ಮೇಲೋ ಬರೆದ ಕವನ ಸಾಹಿತ್ಯದ ದೃಷ್ಟಿಯಿಂದ ಮೌಲಿಕವಾಗಿರಬಹುದಾದರೂ ಗಾಯನಕ್ಕಲ್ಲ. ಅಲ್ಲದೆ ಆರಿಸುವ ಕವನಗಳು ಚಿಕ್ಕವಾಗಿ ಚೊಕ್ಕವಾಗಿದ್ದರೆ ಚೆಂದ. ಹಿರಿ ದೊಡ್ಡ ದೊಡ್ಡ ಕವನಗಳಿಗೆ ಸ್ವರ ಸಂಯೋಜಿಸಿ ಹಾಡಿದರೆ ಪ್ರಾಯಃ ಶ್ರೋತೃಗಳ ತಾಳ್ಮೆಯ ಪರೀಕ್ಷೆಯಾದೀತು; ಅಲ್ಲದೆ ಹಾಡುವವರಿಗೆ ಬೇಸರಿಕೆಯೂ ಬಂದೀತು. ಯಾವುದೇ ಒಂದು ಕವನವನ್ನು ಒಂದು ರಾಗ ಚೆನ್ನಾಗಿದೆ, ಸುಂದರವಾಗಿದೆ, ಸಂಗೀತದ ಚೌಕಟ್ಟು ಎಂದು ಅದರ ನಡುವೆ ತುರುಕಬಾರದು. ಕವನದ ಭಾವ ಮುಖ್ಯವೇ ಹೊರತು ಮೂಡಿ ಬಂದ ಯಾವುದೋ ರಾಗದ ಲಹರಿಯಲ್ಲ.

ಸುಗಮ ಸಂಗೀತವನ್ನು ಹಾಡುವವರು ಸಾಹಿತ್ಯ ಅರ್ಥವಾಗುವಂತೆ ಸ್ಫುಟವಾಗಿ ಹಾಡಬೇಕು. ಹಾಡುವಾಗ ಉಚ್ಚಾರಣೆ ನಾದಮಯವಾಗಿದ್ದು ಹ್ರಸ್ವ, ದೀರ್ಘಾಕ್ಷರಗಳ ವಿವೇಚನೆ ಅತಿಮುಖ್ಯ. ರಾಗ, ತಾಳಗಳ ದೃಷ್ಟಿಯಿಂದ ಒಂದು ಪದವನ್ನು ಎಲ್ಲೋ ಎಳೆಯುವುದು, ಮತ್ತೆಲ್ಲೋ ಮೊಟಕು ಮಾಡುವುದು ರಸಾಭಾಸದ ಪರಮಾವಧಿಯಾದೀತು. ಎಲ್ಲಕ್ಕಿಂತ ಹೆಚ್ಚಾಗಿ ಹಾಡಲು ಸುಮಧುರ ಕಂಠವಿರಲೇ ಬೇಕು. ಶಾರೀರವನ್ನು ಗೀತೆಯ ಭಾವಕ್ಕೆ ತಕ್ಕಂತೆ ನಿಯಂತ್ರಿಸಿಕೊಂಡು ಗೀತೆಯ ಭಾವವನ್ನು ಅಭಿವ್ಯಕ್ತಿಗೊಳಿಸುವ ಕಲಾವಂತಿಕೆ ಅತ್ಯಗತ್ಯ. ಒಂದೇ ಮಾತಿನಲ್ಲಿ ಹೇಳುವುದಾದರೆ: ಕವನವನ್ನು ಬರಿದೆ ಹಾಡಿದರೆ ಸಾಲದು; ಕವನವೇ ತಾವಾಗಬೇಕು.

ಬಹಳ ಜನರಲ್ಲಿ ಸುಗಮ ಸಂಗೀತವನ್ನು ಯಾರು ಬೇಕಾದರೂ ಹಾಡಬಹುದು ಎಂಬ ತಪ್ಪು ಕಲ್ಪನೆ ಇದೆ. ಇದು ಕರತಲಾಮಲಕವಾಗಬೇಕಾದರೆ ನಿರಂತರ ಅಭ್ಯಾಸ ಅಗತ್ಯ. ಜೊತೆಗೆ ಶಾಸ್ತ್ರೀಯ ಸಂಗೀತದ ಬುನಾದಿ ಇದ್ದರೆ ಸುಗಮ ಸಂಗೀತದ ಕಲಿಕೆ ಸುಲಭವಾಗುತ್ತದೆ.

ಎಚ್. ಆರ್. ಲೀಲಾವತಿ

---

# ರಸಪ್ರಶ್ನೆ ೧೦

೧ ಶ್ರೀ ಬಿಡಾರಂ ಕೃಷ್ಣಪ್ಪನವರ ಅಂಕಿತ ಯಾವುದು ?

೨ "ನಾ ಕಂಡ ಕಲಾವಿದರು" ಮತ್ತು "ನೆನಪುಗಳು" ಎಂಬ ಅಮೂಲ್ಯ ಪುಸ್ತಕಗಳನ್ನು ಬರೆದ ಲೇಖಕರು ಯಾರು ?

೩. "ಚತುರ್ದಶರಾಗಮಾಲಿಕೆ"ಯನ್ನು ರಚಿಸಿರುವ ವಾಗ್ಗೇಯಕಾರರು ಯಾರು ?

೪ ಮಿಶ್ರಜಾತಿ ಧ್ರುವತಾಳವನ್ನು ಸಂಕೀರ್ಣಗತಿಯಲ್ಲಿ ಭೇದ ಮಾಡಿದರೆ ಆಗುವ ಅಕ್ಷರಗಳೆಷ್ಟು ?

೫ . ಮುತ್ತಯ್ಯ ಭಾಗವತರ ತಮಿಳು ಶಾಸ್ತ್ರಗ್ರಂಥದ ಹೆಸರೇನು ?

# ರಸಪ್ರಶ್ನೆ ೯ರ ಉತ್ತರಗಳು

೧ ಶ್ರೀ ಪಟ್ಣಂ ಸುಬ್ರಹ್ಮಣ್ಯ ಅಯ್ಯರ್
೨ ಶ್ರೀ ನಾರಾಯಣತೀರ್ಥರು
೩ ವೆಂಕಟಮಖಿ
೪ ವೆಂಕಟಸುಬ್ರಹ್ಮಣ್ಯ
೫ ಪಚ್ಚಿಮಿರಿಯಂ ಆದಿ ಅಪ್ಪಯ್ಯ

---

## ಎಲ್ಲ ಪ್ರಶ್ನೆಗಳಿಗೂ ಸರಿಯಾಗಿ ಉತ್ತರ ಬರೆದವರು

೧ ಸರಸ್ವತಿ ಮೋಹನ್, ೨ ಉಮಾ, ೩ ಆರ್. ಸುಧಾ, ೪ ಜಿ. ಆರ್. ರಶ್ಮಿ, ೫ ಶ್ರೀ ವಿದ್ಯಾಪ್ರಸಾದ್, ೬ ಎಸ್. ವಾಣಿ ಮತ್ತು ಎಸ್. ಪದ್ಮ, ೭ ಲೀಲಾ ನಾಗರಾಜ್, ೮ ಬಿ. ಎಸ್. ಶಾರದ, ೯ ಚಂಪಕವಲ್ಲಿ, ೧೦ ಎಸ್. ಬಿ. ಯಾಮಿನಿ

---

# ರಾಗದರ್ಶನ : ಧೀರ ಶಂಕರಾಭರಣ

ಆ : ಸರಿ$_2$ಗ$_3$ಮ$_1$ಪದ$_2$ನಿ$_3$ಸ
ಅ : ಸ ನಿ ದ ಪ ಮ ಗ ರಿ ಸ
} ೨೯ನೇ ಮೇಳರಾಗ

ಈ ರಾಗವು ೫ನೇ ಚಕ್ರವಾದ (ಬಾಣ)ದಲ್ಲಿ ೫ನೇರಾಗ. ಅಂದರೆ ೨೯ನೇ ಮೇಳರಾಗ. ಕ ಟ ಪ ಯಾದಿ ಸಂಖ್ಯೆಗೆ ಅನುಕೂಲವಾಗುವಂತೆ "ಧೀರ" ಎಂಬ ಪದವನ್ನು ಸೇರಿಸಿದ್ದಾರೆ. ಪ್ರಕೃತಿಸ್ವರಗಳಾದ ಷಡ್ಜ ಮತ್ತು ಪಂಚಮಗಳೊಡನೆ ಚತುಶ್ಶ್ರುತಿರಿಷಭ, ಅಂತರ ಗಾಂಧಾರ, ಶುದ್ಧ ಮಧ್ಯಮ, ಚತುಶ್ಶ್ರುತಿ ಧೈವತ ಮತ್ತು ಕಾಕಲಿ ನಿಷಾದ ಸ್ವರಗಳು ಬರುತ್ತವೆ. ಈ ರಾಗವು ಅಧಿಕ ಸಂಖ್ಯೆಯಲ್ಲಿ ಜನ್ಯರಾಗಗಳನ್ನು ಹೊಂದಿರುವ ಮೇಳ. ಸರ್ವಸ್ವರ ಗಮಕವರಿಕರಕ್ತಿರಾಗ. ಈ ರಾಗದಲ್ಲಿ ಬರುವ ಎಲ್ಲ ಸ್ವರಗಳೂ ರಾಗಛಾಯಾಸ್ವರಗಳು. ರಿಷಭ ಮತ್ತು ಧೈವತಗಳು ಕೆಲವು ಸಂಚಾರಗಳಲ್ಲಿ ದೀರ್ಘವಾಗಿ ಕಂಪಿತ ಗಮಕದೊಡನೆ ನುಡಿಯುವುದುಂಟು. ಸವಿಸ್ತಾರವಾಗಿ ಹಾಡಬಹುದಾದ ಸುಪ್ರಸಿದ್ಧವಾದ ಜನಕರಾಗ. "ರಿಸನಿದ ನಿಪದನಿ, ಮಪಗಮರಿಗಸ, ಸನಿಪಾ, ಸದಾಪ" ಮುಂತಾದವು ರಾಗದ ವಿಶೇಷ ಹಾಗೂ ಅಪೂರ್ವ ಸಂಚಾರಗಳು. ಆಂಗ್ಲಸಂಗೀತಪದ್ಧತಿಯ ವರ್ಣ ಮಟ್ಟುಗಳ ಧಾಟಿಯಲ್ಲಿ "ದಾಮಾರೀ," "ನೀರೀಗಾಮದಾನಿ" ಎಂಬ ಸಂಚಾರವು ಸ್ವಾತೀತಿರುನಾಳರ ಚಲಮೇಲ ಎಂಬ ಅಷ್ಟತಾಳದ ವರ್ಣದಲ್ಲಿ ಪ್ರಯೋಗಿಸಲ್ಪಟ್ಟು ರಾಗರಂಜಕವಾಗಿದೆ. ಪೂರ್ವಾಚಾರ್ಯರ ಅಭಿಪ್ರಾಯದಂತೆ ಶಂಕರಾಭರಣ ರಾಗವು ಸಂಧ್ಯಾಕಾಲದಲ್ಲಿ ಹಾಡಲು ನಿಯಮಿತವಾಗಿದ್ದಿತು. ಆದರೆ ಇದು ಸಾರ್ವಕಾಲಿಕ ರಾಗವೆನ್ನುವುದು ಸಮಂಜಸ. ಗೇಯ ನಾಟಕಗಳಲ್ಲಿ, ಶ್ಲೋಕ, ಪದ್ಯ ಮತ್ತು ವೃತ್ತಗಳನ್ನು ಈ ರಾಗದಲ್ಲಿ ಹಾಡಲಾಗುತ್ತದೆ. ಕರುಣ ಮತ್ತು ಭಕ್ತಿರಸಪ್ರಧಾನವಾದ ರಾಗ, ತ್ರಿಸ್ಥಾಯಿರಾಗ ನಿಷಾದ,

ಗಾಂಧಾರ ಮಧ್ಯಮ, ಪಂಚಮ ಜೀವಸ್ವರಗಳು. ಈ ರಾಗದಲ್ಲಿ ಎಲ್ಲ ಪ್ರಸಿದ್ಧ ವಾಗ್ಗೇಯಕಾರರ ರಚನೆಗಳೂ ಮತ್ತು ಎಲ್ಲ ವಿಧದ ಸಂಗೀತ ರಚನೆಗಳೂ ಇವೆ. ಈ ರಾಗದ ರಚನೆಗಳು ಸಾಮಾನ್ಯವಾಗಿ ಷಡ್ಜ, ಗಾಂಧಾರ, ಮಧ್ಯಮ ಮತ್ತು ಪಂಚಮಗಳಲ್ಲಿ ಪ್ರಾರಂಭವಾಗುತ್ತವೆ.

೧೮ನೇ ಶತಮಾನದಲ್ಲಿ ತಂಜಾವೂರು ಸಂಸ್ಥಾನದ ವಿದ್ವನ್ಮಣಿಗಳಲ್ಲಿ ಒಬ್ಬರಾದ ಶಂಕರಾಭರಣಂ ನರಸಯ್ಯನವರು ಈ ರಾಗವನ್ನು ಹಾಡುತ್ತಿದ್ದವರಲ್ಲಿ ಅದ್ವಿತೀಯರಾಗಿದ್ದರೆಂದು ತಿಳಿದುಬಂದಿದೆ. ಹಿಂದೂಸ್ಥಾನಿ ಸಂಗೀತಪದ್ಧತಿಯ "ಬಿಲಾವಲ್" ರಾಗವು ಶಂಕರಾಭರಣವನ್ನು ಸ್ಥೂಲವಾಗಿ ಹೋಲುತ್ತದೆ ಮತ್ತು ಪಾಶ್ಚಾತ್ಯ ಸಂಗೀತಪದ್ಧತಿಯ "Major Diatonic Scale" ಎಂಬುದಕ್ಕೂ ಮತ್ತು ಶಂಕರಾಭರಣಕ್ಕೂ ಸಾಮ್ಯವಿದೆ. ಸಂಗೀತ ರತ್ನಾಕರ, ಸಂಗೀತ ಮಕರಂದ, ಮತ್ತು ಸಂಗೀತ ಸಮಯಸಾರ ಗ್ರಂಥಗಳಲ್ಲಿ ಉಲ್ಲೇಖಿಸಿರುವ ರಾಗಗಳಲ್ಲಿ ಶಂಕರಾಭರಣವೂ ಒಂದು. ಇದು ಪಂಚಮೂರ್ಛನಕಾರಕ ಮೇಳ. ಈ ರಾಗದ ರಿಷಭ, ಗಾಂಧಾರ, ಮಧ್ಯಮ, ಪಂಚಮ ಮತ್ತು ಧೈವತ ಮೂರ್ಛನಗಳಿಂದ ಕ್ರಮವಾಗಿ ಖರಹರಪ್ರಿಯ, ತೋಡಿ, ಕಲ್ಯಾಣಿ, ಹರಿಕಾಂಭೋಜಿ ಮತ್ತು ನಟಭೈರವಿ ರಾಗಗಳು ಉತ್ಪತ್ತಿಯಾಗುತ್ತವೆ.

## ಪ್ರಸಿದ್ಧ ರಚನೆಗಳು

| | | | | |
|---|---|---|---|---|
| ಗೀತೆ : | ಅರೆದಶರಥ–ಸಿಂಹನಂದನ | | | |
| ವರ್ಣ : | ಸಾಮಿನಿನ್ನೆ | .... | ಆದಿತಾಳ | ವೀಣಾ ಕುಪ್ಪಯ್ಯರ್ |
| | ಚಲಮೇಲ | .... | ಅಟ್ಟತಾಳ | ಸ್ವಾತೀತಿರುನಾಳ್ |
| ಕೃತಿಗಳು : | ಎಂದುಕುಪೆದ್ದಲ | .... | ಆದಿ | ಶ್ರೀ ತ್ಯಾಗರಾಜರು |
| | ಸ್ವರರಾಗಸುಧಾರಸ | .... | " | " |
| | ಎದುಟನಿಲಚಿತೆ | .... | " | " |
| | ಏಮಿನೇರಮು | .... | " | " |
| | ರಾಮ ನಿನುವಿನಾ | .... | ರೂಪಕ | " |
| | ಅಕ್ಷಯಲಿಂಗವಿಭೋ | .... | ಮಿಶ್ರಚಾಪು | ಶ್ರೀ ಮುತ್ತುಸ್ವಾಮಿದೀಕ್ಷಿತರು |
| | ನಾಗಲಿಂಗಂ | .... | " | " |
| | ಸರೋಜದಳನೇತ್ರಿ | .... | " | ಶ್ರೀ ಶ್ಯಾಮಾಶಾಸ್ತ್ರಿಗಳು |
| | ದೇವೀ ಮೀನನೇತ್ರಿ | .... | " | " |
| | ಶಂಕರಾಚಾರ್ಯಂ | .... | ಆದಿ | ಸುಬ್ಬರಾಮದೀಕ್ಷಿತರು |
| ಪದ : | ಎವ್ವಡೆ ಭಾಮ | .... | ಚಾಪುತಾಳ | ಕ್ಷೇತ್ರಜ್ಞ |
| | ಚಲ್ಲನಾಯನು | .... | ತ್ರಿಪುಟ | " |

ಆರ್.ವಸಂತಲಕ್ಷ್ಮಿ

# ಸಂಪಾದಕೀಯ

ಕಳೆದತಿಂಗಳ ಜ್ಯೇಷ್ಠ ಶುದ್ಧ ಚತುರ್ದಶಿ ಬುಧವಾರದಂದು (೨೨-೬-೧೯೯೪) ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ಉತ್ಸವದ ಉತ್ಸಾಹ; ಜಾತ್ರೆಯ ಸಂಭ್ರಮ. ಸಾವಿರಾರು ಸಂಖ್ಯೆಯಲ್ಲಿ ನೆರೆದ ಜನಸಂದಣಿ. ಭಕ್ತಾದಿಗಳಿಂದ ವಿವಿಧ ಸೇವೆಗಳು, ಕಾಣಿಕೆಗಳ ಸುರಿಮಳೆ. ಸ್ವತಃ ಶ್ರೀ ಶ್ರೀಪಾದರಾಜಮಠದ ಸ್ವಾಮಿಗಳಿಂದ ನೃಸಿಂಹ ತೀರ್ಥದಲ್ಲಿರುವ ಶ್ರೀಪಾದರಾಜರ ವೃಂದಾವನಕ್ಕೆ ವಿಶೇಷ ಪೂಜೆ, ಸರ್ವಸೇವೆಗಳು. ವಿದ್ವತ್ಸಭೆಗಳು, ಗಾಯನ, ಪ್ರವಚನ ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳಿಂದ ಮಠದ ಪರಿಸರ ತುಂಬಿ ತುಳುಕುತ್ತಿತ್ತು. ಸಂದರ್ಭ: ಶ್ರೀ ಶ್ರೀಪಾದರಾಜರ ಆರಾಧನಾ ಮಹೋತ್ಸವ.

ಈಗ್ಗೆ ಸುಮಾರು ೫೦೦ ವರ್ಷಗಳಿಗೂ ಹಿಂದೆ ಬೆಂಗಳೂರು ಜಿಲ್ಲೆ ಚನ್ನಪಟ್ಟಣ ತಾಲ್ಲೂಕಿನಲ್ಲಿರುವ ಅಬ್ಬೂರಿನಲ್ಲಿ ಎಲ್ಲರಂತೆ ಸಾಮಾನ್ಯ ಕುಟುಂಬವೊಂದರಲ್ಲಿ ಶೇಷಗಿರಿಯಪ್ಪ-ಗಿರಿಯಮ್ಮ ದಂಪತಿಗಳಿಗೆ ಹುಟ್ಟಿದ ಮಗು ಲಕ್ಷ್ಮೀನಾರಾಯಣ. ಮಾಧ್ವಯತಿಗಳಾದ ಸ್ವರ್ಣವರ್ಣತೀರ್ಥರಿಂದ ಸನ್ಯಾಸ ಸ್ವೀಕರಿಸಿ ಮುಳಬಾಗಿಲಿನಲ್ಲಿ ಮಾಧ್ವ ಮಹಾ ಸಂಸ್ಥಾನ ಸ್ಥಾಪಿಸಿ ಅದನ್ನು ಆ ಕಾಲದ ಸುಪ್ರಸಿದ್ಧ ದ್ವೈತ ವೇದಾಂತಕೇಂದ್ರವಾಗಿ ಬೆಳೆಸಿ ತಾನೂ ಮಹಾಚೇತನವಾಗಿ ಬೆಳೆಯಿತು. ಆ ಕಾಲಕ್ಕೆ ಮುಳಬಾಗಿಲು ವಿಜಯನಗರದ ಅರಸರ ಆಧಿಪತ್ಯಕ್ಕೆ ಒಳಪಟ್ಟು ವಿಜಯನಗರಸಾಮ್ರಾಜ್ಯದ ಮೂಡಬಾಗಿಲಿನಂತೆ ಶೋಭಿಸುತ್ತಿತ್ತು. ಪ್ರಶಾಂತ ಪರಿಸರ ; ನೃಸಿಂಹತೀರ್ಥದಲ್ಲಿದ್ದ ಕಾವೇರೀ ಸನ್ನಿಧಾನ. ಶ್ರೀಮಠದ ಗೋಪೀನಾಥನಿಗೆ ಯತಿಗಳಿಂದ ನಿತ್ಯ ಕನ್ನಡ ಸ್ತುತಿಗಳ ಸೇವೆ ! ಕನ್ನಡಿಗರ ಭಾಗ್ಯವೇ ಕಣ್ತೆರೆಯಿತು. ಅದುವರೆಗೆ ಜನಸಾಮಾನ್ಯರಿಗೆ ಎಟುಕದಿದ್ದ, ಕೇವಲ ಸಂಸ್ಕೃತ ಬಲ್ಲ ಪಂಡಿತರಿಗೆ ಮಾತ್ರ ಮೀಸಲಾಗಿದ್ದ ವೇದಾಂತವಿದ್ಯೆ ಶ್ರೀಪಾದರಾಜರ ಮೂಲಕ ಕನ್ನಡದ ಚಿಕ್ಕ ಚಿಕ್ಕ ಸ್ತೋತ್ರ ಪದ್ಯಗಳಲ್ಲಿ ಚಿಮ್ಮಿಹರಿಯಿತು. ಹರಿದಾಸಸಾಹಿತ್ಯಪ್ರವರ್ತಕರಾದ ಅವರು ಭಾರತೀಯರ ಧಾರ್ಮಿಕ ಬದುಕಿನ ಪರಮಗುರಿಯಾದ ಮೋಕ್ಷಸಾಧನೆಗೆ ದೇಶಭಾಷೆಯಾದ ಕನ್ನಡದ ಮೂಲಕ ಭಕ್ತಿಯ ಹೆಬ್ಬಾಗಿಲನ್ನೇ ತೆರೆದರು. ಭಾಗವತರ ತಂಡದಲ್ಲಿ ತಾವೂ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕುಣಿಯುವ ಮೂಲಕ ಶ್ರೀಪಾದರಾಜರು ಭಕ್ತರ ಮೈಯಲ್ಲಿ ಭಕ್ತಿಯ ಮಿಂಚನ್ನು ಹರಿಸಿದರು. ತಮ್ಮ ಅಂತರಂಗಿಕ ಭಕ್ತಿಯ ವಿವಿಧ ಮಜಲುಗಳನ್ನು ಕನ್ನಡದ ಕೃತಿಗಳ ಮೂಲಕ ತೆರೆದಿಟ್ಟರು. ಕೀರ್ತನೆಗಳಲ್ಲಿ ಮೂಡಿಬಂದಿರುವ ಅವರ ಆತ್ಮಶೋಧನೆ, ಭಗವಂತನ ಆರಾಧನೆಯ ಪರಿ, ದ್ವೈತತತ್ತ್ವ ಪ್ರತಿಪಾದನೆ ಹಾಗೂ ಲೋಕನೀತಿಗಳು ಆರ್ತಭಕ್ತರಿಗೆ ಒಂದು ಹೊಸ ಪ್ರಪಂಚವನ್ನೇ ತೆರೆದು ತೋರಿಸಿತು. ಭಕ್ತರಾದ ತಮ್ಮ ಸುಖದುಃಖಗಳನ್ನು ಆ ಭಗವಂತನೆದುರಿಗೆ ತೋಡಿಕೊಳ್ಳುವ ನೆಪದಲ್ಲಿ ಅವರು ಮಾನವ ಸಮುದಾಯದ ಸುಖದುಃಖಗಳಿಗೇ ಮಾತಾದರು. ಭಗವಂತನ ಅನುಗ್ರಹ ಸಂಪಾದನೆಗಾಗಿ ಪರಿತಪಿಸುವ ಹಂಬಲಿಸುವ ಸಾತ್ವಿಕ ಚೇತನಗಳ ಪ್ರತೀಕವೇ ಆಗಿ ಪರಿಣಮಿಸಿದರು. ಸದಾ ಲೋಭ ಲಾಭಗಳ ಚಿಂತನೆಯಲ್ಲಿದ್ದು ಸಂಸಾರದ ಸುಳಿಯಲ್ಲಿ ಸಿಕ್ಕಿ ಪ್ರೀತಿ ವ್ಯಾಮೋಹಗಳ ಕೋಟಲೆಯೊಳಗೆ ಬಿದ್ದು ಒದ್ದಾಡುತ್ತಿರುವ ; ಸ್ವಾರ್ಥದುರಾಸೆಗಳಲ್ಲೇ ಆಯುಷ್ಯವನ್ನು ವ್ಯರ್ಥವಾಗಿ ಕಳೆಯುತ್ತಿರುವ ಮಾನವಕೋಟಿಯ ಮನೋದೌರ್ಬಲ್ಯಗಳನ್ನು ಗುರುತಿಸಿ, ಅವನ್ನು ಖಂಡಿಸಿ ಪರೋಪಕಾರಿಬದುಕು ಸತ್ಸಂಗ ಸತ್ಯ ಧರ್ಮಯುತವಾದ ಮೌಲಿಕ ಬದುಕನ್ನು ಬದುಕಲು ಮಾರ್ಗದರ್ಶಕರಾದರು. ಶ್ರೀಹರಿಯೊಬ್ಬನೇ ಪರದೈವ. ಅವನನ್ನು ಮನಃಪೂರ್ವಕವಾಗಿ ಸ್ತುತಿಸಿ ಅವನ ಕರುಣೆಗೆ ಪಾತ್ರರಾಗಿರಿ ಎಂದು ಜನ ಸಾಮಾನ್ಯರಿಗೆ

ಭಕ್ತಿಮಾರ್ಗವನ್ನು ಬೋಧಿಸಿ, ಜನರ ಬದುಕಿನ ವಿವಿಧ ಮಾನವೀಯ ಸಂಬಂಧಗಳನ್ನು ಶ್ರೀಹರಿಯೊಡನೆ ಸ್ಥಾಪಿಸಿಕೊಂಡರು. ಅವನನ್ನು ಒಡೆಯನಾಗಿ, ಗೆಳೆಯನಾಗಿ, ಇನಿಯನಾಗಿ, ಎಳೆಯನಾಗಿ ಕಂಡು, ಭಾವಿಸಿ ಸ್ತುತಿಸಿದರು. ಜನರ ಭಾವ ಭಾವನೆಗಳನ್ನು ಶ್ರೀಹರಿಯತ್ತ ತಿರುಗಿಸಿ, ದಾಸ್ಯ ಸಖ್ಯ ಮಧುರ ವಾತ್ಸಲ್ಯ ಭಾವಗಳಿಂದ ಅವನನ್ನಾರಾಧಿಸಿದರು. ಭಕ್ತಿ ಬೇರೆಯಲ್ಲ ಬದುಕು ಬೇರೆಯಲ್ಲವೆಂಬ ಭಾವನೆ ಜನರಲ್ಲಿ ಜಾಗೃತವಾಯಿತು. ಬದುಕಿನ ಎಲ್ಲ ಮಜಲುಗಳೂ ಭಕ್ತಿಸಾಧನೆಯ ವೈವಿಧ್ಯಗಳಾಗಿ ಪರಿಣಮಿಸಿದುವು.

ಮನುಷ್ಯನ ಮೂಲಭೂತ ಮನೋಭಾವ ಜಾತಿ ಮತ ಪಂಥ ದೇಶ ಕಾಲಗಳನ್ನು ಮೀರಿದ್ದು, ಸಾರ್ವತ್ರಿಕ ಹಾಗೂ ಸಾರ್ವಕಾಲಿಕವಾದದ್ದು. ಆದ್ದರಿಂದಲೇ ಅಂದು ಅವರು ಬಿತ್ತರಿಸಿದ ಸತ್ಯ ಧರ್ಮ ಅಹಿಂಸೆಯೇ ಮೊದಲಾದ ಜೀವನ ಮೌಲ್ಯಗಳು ಇಂದಿಗೂ ಮೌಲ್ಯಗಳೇ. ಪ್ರೀತಿ ಪ್ರಣಯ ವಾತ್ಸಲ್ಯ ಸ್ನೇಹಗಳು ಮಾನವರೆಲ್ಲರಿಗೂ ಅನುಭವವೇದ್ಯ ಮತ್ತು ಅಪ್ಯಾಯಮಾನ. ಹಾಗಾಗಿ ಶ್ರೀಪಾದರಾಜರು ತಮ್ಮ ಕೃತಿಗಳನ್ನು ಹಾಡಿ ಐದು ಶತಕಗಳೇ ಕಳೆದರೂ ಅವರು ಹೇಳಿರುವ ವಿಚಾರಗಳು ಇಂದಿಗೂ ಪ್ರಸ್ತುತ; ಅವರ ಸಾಹಿತ್ಯ ಸರ್ವಜನಾದರಣೀಯ. ವರ್ಷೇ ವರ್ಷೇ ಅವರ ಆರಾಧನಾ ಮಹೋತ್ಸವ ವಿಜೃಂಭಣೆಯಿಂದ ನಡೆಯುತ್ತಿದ್ದು ಅಪಾರ ಸಂಖ್ಯೆಯಲ್ಲಿ ಜನರು ನೆರೆದು ಅವರನ್ನು ನೆನೆದು ನಮಿಸುತ್ತಿರುವರು.

ಸಂತರ ಗುರುಗಳ ಧರ್ಮಾಧಿಕಾರಿಗಳ ಸಮಾಜಸೇವಕರ ಜೀವನವೇ ಹೀಗೆ. ಅದು ಸಮುದಾಯದ, ಸಮಷ್ಟಿಯ ಉನ್ನತಿಕೆಗಾಗಿಯೇ, ತಾನು ಉರಿದು ಬೆಳಕು ಕೊಡುವ ಕರ್ಪೂರದಂತೆ, ಬಸವಣ್ಣ-ಅಕ್ಕ, ಪುರಂದರ-ಕನಕರು, ಅನ್ನಮಯ್ಯ-ತ್ಯಾಗರಾಜರೇ ಮೊದಲಾದ ಸಂತರ; ಮಹಾತ್ಮ ಗಾಂಧಿ ಅಂಬೇಡ್ಕರ್ ಮೊದಲಾದ ಸಮಾಜ ಸೇವಕರ ಗುರಿಯೂ ಸಮಾಜವನ್ನು ತಿದ್ದಿ ಮುನ್ನಡೆಸುವುದೇ ಆಗಿತ್ತು. ಅಂಥವರ ಜಯಂತಿಗಳನ್ನು, ಆರಾಧನೆಗಳನ್ನು ಆಚರಿಸುವ ಮೂಲಕ ಜನತೆ, ಅವರನ್ನು ನೆನೆಯುತ್ತದೆ; ಸಮಾಜ ಅವರಿಗೆ ತನ್ನ ಕೃತಜ್ಞತಾಪೂರ್ವಕ ನಮನಗಳನ್ನು ಸಲ್ಲಿಸುತ್ತದೆ. ಇದು ನಮ್ಮ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗವೂ ಹೌದು. ಗಾನಭಾರತೀ ಸಂಸ್ಥೆಯೂ ಇಂತಹ ಉತ್ಸವಗಳಲ್ಲಿ ಪಾಲ್ಗೊಂಡು ಅಂಥ ಸಂತ ಮಹಂತರಿಗೆ ತನ್ನ ಗೌರವವನ್ನು ಸಲ್ಲಿಸುತ್ತ ಬಂದಿದೆ.

---


## ADVERTISEMENTS

Best compliments and hearty congratulations to *Tillana* from

- M/S Agromore Private Limited
  Mysore Road Bangalore 560 026
- Sri M. Sripada Rao, Secretary NIE, and
  Smt Shakuntala Rao, Corporator, Mysore
- M/S Indavara Engineering Co Pvt Ltd, Mysore
- Dr H. S. Venkatesh BSc MBBS MD (Nimhans)

Sowmya mental Health Centre and EEG Clinic APMC Complex
Seshadri Iyer Road, Mysore 570 021 Phone 30318

* Dr T. Balakrishna Achar MBBS MD FICA
Consultant Physician and Cardiologist (UK certified)
372/5 Parimala Complex Chamaraja Double Road
Mysore 570 024 Phone 36362

* Mrs Padma Jagadish & Ms Lipica Lovanya Jagadish

* Bhavani Foods Pvt Ltd
Manufacturers of Orkay Instant Food
Mysore 570 016 Phone 26166

---

## ಅಂಜಲಿ ತೋಡಿ

ಹಿಂದೂಸ್ಥಾನೀ ಸಂಗೀತದಲ್ಲಿ ಇದೊಂದು ಅಪರಿಚಿತ ರಾಗ. ಇದನ್ನು ಯಾವ ಥಾಟ್‌ನಲ್ಲಿ ಅಳವಡಿಸಬೇಕು ಎಂಬುದು ಅನಿರ್ಧರಣೀಯ. ಆರೋಹಣದಲ್ಲಿ 'ಗ'ವನ್ನು ಒಂದೋ ಉಪಯೋಗಿಸುವುದಿಲ್ಲ, ಇಲ್ಲವೇ ವಕ್ರರೀತಿಯಲ್ಲಿ ಉಪಯೋಗಿಸಲಾಗುವುದು. ಅವರೋಹಣದಲ್ಲಿ ಸಪ್ತಸ್ವರಗಳೂ ಬಳಕೆಯಾಗುತ್ತವೆ. ಎಂದೇ ಇದರ ಜಾತಿ ಷಾಡವ ಸಂಪೂರ್ಣ,

ಆರೋಹಣ : ಸ-ರೆಮ-ಗೂಪನಿಸಂ ಅಥವಾ ಸ-ರೆಮಪಸಂ-ನಿಸಂ-ಧಧನಿನಿಸಂ

ಅವರೋಹಣ : ಸಂ-ಧಪ-ನೀಧಪ-ಮಪಗೂ-ರೆಮ-ಗೂರೆ-ಗೂಸ ಅಥವಾ ಗೂರೆಸ

ಈ ರಾಗದಲ್ಲಿ 'ರಿ' ತೀವ್ರ, 'ಗ' ಕೋಮಲ, 'ಮ' ಶುದ್ಧ, 'ಧ' ಕೋಮಲ ಮತ್ತು ತೀವ್ರ, 'ನಿ' ಕೂಡ ಹಾಗೆ. ಆರೋಹಣದಲ್ಲಿ ಕೋಮಲ 'ಧ,' ಮತ್ತು ಅವರೋಹಣದಲ್ಲಿ ತೀವ್ರ 'ಧ.' ಆರೋಹಣದಲ್ಲಿ ತೀವ್ರ 'ನಿ,' ಅವರೋಹಣದಲ್ಲಿ ಕೋಮಲ 'ನಿ.' ರಾಗಸ್ವರೂಪ ಸ್ಪಷ್ಟವಾಗಿಲ್ಲ. 'ನಿನಿ-ಸಂ-ಧಪ' ಸ್ವರಗಳು ಪಟದೀಪ್ ರಾಗದ ಛಾಯೆ ಕೊಡುತ್ತವೆ, 'ನೀ ಧ ಪ-ಮ ಪ ಗೂ' ಸ್ವರಗಳು ಭೀಮ್‌ಪಲಾಸ್‌ನ್ನೂ 'ಮ ಪ-ಗೂ-ರೆಮ-ಗೂ ರೆ-ಗೂಸ' ಸ್ವರಗಳು ದೇಸಿಯನ್ನೂ ಹೋಲುತ್ತವೆ. ಅಂಜಲಿ ತೋಡಿ ರಾಗದ ವಿಸ್ತಾರದಲ್ಲಿ ಪಟದೀಪ್, ಭೀಮ್‌ಪಲಾಸ್ ಮತ್ತು ದೇಸೀ ರಾಗಛಾಯೆಗಳನ್ನು ತೋರಿಸಬೇಕು. ಹೆಸರು ಅಂಜಲಿ ತೋಡಿ ಎಂದಿದ್ದರೂ ತೋಡಿಯ ಛಾಯೆ ಇದರಲ್ಲಿ ಇರಬಹುದೆನ್ನಲು ಪುರಾವೆ ಇಲ್ಲ. ಅಂಜಲಿ ತೋಡಿಗೆ ಜ್ಞಾತಿ ರಾಗ ಯಾವುದೂ ಇಲ್ಲ. ಕರ್ನಾಟಕ ಸಂಗೀತದಲ್ಲಿ ಈ ಹೆಸರಿನ ರಾಗವಿಲ್ಲ, ಹಿಂದೂಸ್ಥಾನೀ ಅಂಜಲಿತೋಡಿಯ ಸ್ವರೂಪ ಇರುವ ರಾಗವೂ ಇಲ್ಲ.

Excerpts from RAGANIDHI, a comparative study of Hiudustani and Karnatak Ragas by B. Subba Rao (The Madras Music Academy, 306· T T K Road, Madras 600 014· Four volumes in English Rs 155)

ಮುಂದಿನ ತಿಂಗಳು 'ಅಂಬಿಕ'